ಓ ಎಸ್ : **254/2009** ಡಿ. ಡಬ್ಲ್ಯೂ-**1**

ಸಾಕ್ಷಿಯನ್ನು ದಿಃ **26.10.2021** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲುಃ ವಾದಿ ಪರ ಶ್ರೀ ಕೆ.ಕೆ.ಯು ವಕೀಲರಿಂದಃ

ವಾದಿ ಈ ದಾವೆಯನ್ನು ಯಾವ ಪರಿಹಾರಕ್ಕಾಗಿ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿದೆ. ವಾದಿ ಸಲ್ಲಿಸಿರುವ ದಾಖಲೆಗಳನ್ನೂ ನಾನು ನೋಡಿರುತ್ತೇನೆ. ದಾವಾ ಆಸ್ತಿಯ ಎ ಷೆಡ್ಯೂಲ್ ಸ್ವತ್ತನ್ನು ವಾದಿ **1** ಕ್ರಯಪತ್ರದ ಮೂಲಕ **28.01.1980** ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ನಾಗಮ್ಮ ಎಂಬುವವರಿಂದ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಾಗಮ್ಮರವರು **20.11.1978** ರಲ್ಲಿ ಎ ಷೆಡ್ಯೂಲ್ ಆಸ್ತಿಯನ್ನು ಭಕೀಲ ದೊಡ್ಡಲಿಂಗೇಗೌಡರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮ **35** ಅಡಿ, ಉತ್ತರ -ದಕ್ಷಿಣ **50** ಅಡಿಗಳು ಇರುತ್ತದೆ ಎಂದರೆ ಸರಿ. ಆ ಸಂಬಂಧ ದಾಖಲೆಯನ್ನು ನೋಡಿರುತ್ತೇನೆ . ನಾಗಮ್ಮರವರಿಗೆ ಆಗಿರುವ ಕ್ರಯಪತ್ರದ ಪ್ರಕಾರ ಪೂರ್ವಕ್ಕೆ ರಸ್ತೆ, , ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ನನಗೆ ಸೇರಿದ ಆಸ್ತಿ ಇದೆ ಎಂದರೆ ಸರಿ. ಪಶ್ಚಿಮಕ್ಕೆ ನಂಜುಂಡಮ್ಮರವರ ಜಮೀನು ಎಂದರೆ ನನಗೆ ಗೊತ್ತಿಲ್ಲ. ಸದರಿ ನಾಗಮ್ಮರವರು ದಕ್ಷಿಣ ಭಾಗದ **25X35** ಅಡಿ ಆಸ್ತಿಯನ್ನು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಉತ್ತರದ ಕಡೆ ಇರುವ ಭಾಗವನ್ನು **2** ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಮಾರಾಟ ಆಗಿರುವ ಆಸ್ತಿಯ ದಕ್ಷಿಣಕ್ಕೆ ನನ್ನ ಮನೆ, ಉತ್ತರಕ್ಕೆ **2** ನೇ ಪ್ರತಿವಾದಿಗೆ ಸೇರಿದ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ ನಂಜುಂಡಮ್ಮನವರ ಜಮೀನು ಎಂದರೆ ಸರಿಯಲ್ಲ. ಅದೇ ರೀತಿ ವಾದಿ ಆಸ್ತಿಯ ಪೂರ್ವಕ್ಕೆ ತಿರುಗಾಡುವ ರಸ್ತೆ ಇದೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ದಾಖಲೆಗಳನ್ನು ನೋಡಿರುತ್ತೇನೆ. ನನಗೆ ನನ್ನ ಆಸ್ತಿ ನಿಡಿ-**1** ರಂತೆ ನನಗೆ ನಟರಾಜ ಶಾಸ್ತ್ರಿಗಳಿಂದ ಬಂದಿರುವ ಆಸ್ತಿ ಎಂದರೆ ಸರಿ. ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಮನೆ ನಂ.**126** ಎಂದು ನುಡಿಯುತ್ತಾರೆ. ಸೈಟ್ ನಂ **198** ಕ್ಕೆ ಸಂಬಂಧಿಸಿದ ದಾಖಲೆಯಾದ ನಿಡಿ-**1** ನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿಡಿ-**1** ರಲ್ಲಿ ನಮೂದಾಗಿರುವ ಆಸ್ತಿಯ ಚೆಕ್ಕುಬಂಧಿ ನನಗೆ ಗೊತ್ತಿದೆ. ನಿಡಿ-**1** ದಾಖಲೆಯ ದಕ್ಷಿಣಕ್ಕೆ ರಾಜಬೀದಿ ಬರುತ್ತದೆ ಎಂದರೆ ಸರಿ. ಉತ್ತರಕ್ಕೆ ಸೈಟ್ ನಂ **199** ಬರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ಸೈಟ್ ನಂ. **193** ಬರುತ್ತದೆ ಎಂದರೆ ಸರಿ. ಅದೇ ರೀತಿ ಪೂರ್ವಕ್ಕೆ ತಿರುಗಾಡುವ ಸರ್ಕಾರಿ ರಸ್ತೆ ಬರುತ್ತದೆ ಎಂದರೆ ಸರಿ. ನಿಡಿ-**1** ದಾಖಲೆಯ ವಿಸ್ತೀರ್ಣ ಮನೆ ಮತ್ತು ನಿವೇಶನ ಸೇರಿ **35X50** ಎಂದರೆ ಸರಿ. ನನ್ನ ಮತ್ತು **2** ನೇ ಪ್ರತಿವಾದಿಯ ಮತ್ತು ವಾದಿಯ ಕ್ರಯಪತ್ರದಂತೆ ಪೂರ್ವಕ್ಕೆ ತಿರುಗಾಡುವ ರಸ್ತೆ ಇದೆ

ಎಂದರೆ ಸರಿ. ನನ್ನ ಆಸ್ತಿಯ ದಕ್ಷಿಣ ಕಡೆಗೆ ಅಡ್ಡ ರಸ್ತೆ, ಮತ್ತು **2** ನೇ ಪ್ರತಿವಾದಿಯ ಸ್ವತ್ತಿನ ಉತ್ತರ ದಿಕ್ಕಿಗೆ **2** ಅಡ್ಡರಸ್ತೆ ಬರುತ್ತದೆ ಎಂದರೆ ಸರಿ. ಸದರಿ ರಸ್ತೆಗಳು ತಿ.ನರಸೀಪುರ ಮುಖ್ಯರಸ್ತೆಗೆ ಬಂದು ಸೇರುತ್ತದೆ ಎಂದರೆ ಸರಿ. ನನ್ನ ಮತ್ತು ವಾದಿಯ ಸ್ವತ್ತಿನ ಪೂರ್ವ ದಿಕ್ಕಿಗೆ ಇರುವ ರಸ್ತೆ ಉತ್ತರ - ದಕ್ಷಿಣವಾಗಿದೆ ಎಂದರೆ ಸರಿ. ಸದರಿ ರಸ್ತೆ ಉತ್ತರ ದಕ್ಷಿಣಕ್ಕೆ ಇರುವ ಅಡ್ಡರಸ್ತೆಯನ್ನು ಕೂಡಿಸುತ್ತದೆ. ವಾದಿ ಮತ್ತು **2** ನೇ ಪ್ರತಿವಾದಿಯು ಸದರಿ ರಸ್ತೆಯಲ್ಲಿ ಓಡಾಡುತ್ತಾರೆ ಎಂದರೆ ಸರಿ. **1996** ರಲ್ಲಿ **3** ನೇ ಪ್ರತಿವಾದಿ ಸದರಿ ಪೂರ್ವ ದಿಕ್ಕಿನ ರಸ್ತೆಗೆ ಅಡ್ಡಗಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಂಬಂಧ ವಾದಿ **3** ನೇ ಪ್ರತಿವಾದಿ ವಿರುದ್ಧ ಅಸಲು ದಾವಾ ಸಂಖ್ಯೆ **17/1996** ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು **4.02.1997** ರಲ್ಲಿ ವಾದಿಗೆ ಸದರಿ ರಸ್ತೆಯಲ್ಲಿ ತಿರುಗಾಡುವ ಹಕ್ಕಿದೆ ಎಂದು ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ **3** ನೇ ಪ್ರತಿವಾದಿ ಸದರಿ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. **04.02.2006** ರಲ್ಲಿ ವಾದಿ ಮತ್ತು ಪ್ರತಿವಾದಿ ನಡುವೆ ಸಂದಾಯ ಆಗಿ **11** ಅಡಿ ರಸ್ತೆಯನ್ನು ಉತ್ತರ ದಕ್ಷಿಣವಾಗಿ ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ **2** ನೇ ಪ್ರತಿವಾದಿ **2001** ನೇ ಇಸವಿಯಲ್ಲಿ ಸದರಿ ರಸ್ತೆಯ ಅಡ್ಡಲಾಗಿ ಕಳ್ಳಿಗಿಡಗಳ ಬೇಲಿಯನ್ನು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ನಾವು ಸದರಿ ರಸ್ತೆಯಲ್ಲಿ ಕಾಂಪೌಂಡ್ ನಿರ್ಮಾಣ ಮಾಡಲು ಕಲ್ಲನ್ನು ಜೋಡಿಸಿರುತ್ತೇವೆ ಎಂದರೆ ಸರಿ. ನಿಪಿ-**13,** ನಿಪಿ-**14** ಭಾವಚಿತ್ರದಲ್ಲಿ ಕಾಣುತ್ತಿರುವ ಕಟ್ಟಣ ಕಾಮಾಗಾರಿ ಕೆಲಸ ನಮ್ಮ ಮನೆಯ ಕಾಂಪೌಂಡ್ ನಿರ್ಮಾಣ ಆಗುತ್ತಿರುವಾಗ ತೆಗೆದಿರುವ ಭಾವಚಿತ್ರ. ಆ ರೀತಿ ಕಾಂಪೌಂಡ್ ನಿರ್ಮಾಣ ಮಾಡಲು ಸಂಬಂಧಪಟ್ಟ ಇಲಾಖೆಯಿಂದ ಪರವಾಗನಗಿ ಪಡೆಯಬೇಕು ಎಂದರೆ ಸರಿ. ಆ ಸಂಬಂಧ ಪರವಾನಗಿಯನ್ನು ಪಡೆದಿರುತ್ತೇನೆ. ಆ ರೀತಿ ಯಾವುದೇ ಪರವಾನಗಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಅಕ್ರಮವಾಗಿ ರಸ್ತೆಯಿಂದ ಒತ್ತುವರಿ ಮಾಡಿ ಕಾಂಪೌಂಡ್ ಕಟ್ಟುತ್ತಿರುವುದರಿಂದ ನಮಗೆ ಪರವಾನಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರಸ್ತೆಯನ್ನು ನ್ಯಾಯಾಲಯದಿಂದ ತಿರುಗಾಡುವ ಸಲುವಾಗಿ ಬಿಡಲಾಗಿದೆ ಎಂದು ವಾದಿ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ನಿಡಿ-**2** ರಂತೆ ನಿವೇಶನ ಸಂಖ್ಯೆ **25** ನ್ನು ನಮಗೆ ಸರ್ಕಾರದಿಂದ ಮನೆ ಇಲ್ಲದ ಕಾರಣ ಮಂಜೂರು ಮಾಡಿರುತ್ತಾರೆ. ನಂತರದಲ್ಲಿ ಸ್ವಾಧೀನ ಪತ್ರವನ್ನು ಸಹ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಸ್ವಾಧೀನ ಪತ್ರವನ್ನು ನಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸ ರಿ. ಸೈಟ್ ನಂ **198** ರ ಪೂರ್ವ ದಿಕ್ಕಿನ ರಸ್ತೆಯನ್ನು ಸೇರಿಸಿ ನಮಗೆ ಸರ್ಕಾರದಿಂದ ಮಂಜೂರು ಆಗಿರುವುದರಿಂದ ಸ್ವಾಧೀನ ಪತ್ರ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆಯಿಲ್ಲ. ವಾದಿಗೆ ದಕ್ಷಿಣ ದಿಕ್ಕಿನ ಕಡೆ ಓಡಾಡಲು

ತಡೆಯಾಗಿ ನಾವು ಕಟ್ಟಡವನ್ನು ನಾವು ನಿರ್ಮಾಣ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು ಗ್ರಾಮೀಣ ಮತ್ತು ಪುರಸಭೆ ಜೊತೆಯಾಗಿ ದಾಖಲೆ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಡಿ-3 ನ್ನು ಹೊರತುಪಡಿಸಿ ನಮ್ಮ ಆಸ್ತಿಗೆ ಸಂಬಂಧಿಸಿದ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನಾವು ಅಕ್ರಮವಾಗಿ ಕಟ್ಟಡ ಕಟ್ಟಿರುವುದಿಲ್ಲ. ವಾದಿಗೆ ತಿರುಗಾಡಲು ತೊಂದರೆಯಾಗಿದೆ ಎಂದರೆಸ ರಿಯಲ್ಲ. ಸದರಿ ಕಟ್ಟಡವನ್ನು ಹೊಡೆದು ಹಾಕಿದರೆ ವಾದಿಗೆ ತಿರುಗಾಡಲು ಅನುಕೂಲವಾಗುತ್ತದೆ ಎಂದರೆ ಸರಿಯಲ್ಲ. ನಾವು ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲೂ ಸಹ ದಕ್ಷಿಣ ಕಡೆ ರಸ್ತೆ ಇತ್ತು ಎಂದರೆ ಜನರು ಓಡಾಡುತ್ತಿದ್ದರು ಎಂದು ನುಡಿಯುತ್ತಾರೆ.

<u>ಮರು ವಿಚಾರಣೆಃ ಇಲ್ಲ.</u>

<u>(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)</u>

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ